# ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. **1415/2024**

ಸಾಕ್ಷಿಗೆ ದಿನಾಂಕ 17-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 3 P.W.: 3

| | | |
|---|---|---|
| ಹೆಸರು | : | ಹೊಸಕೇರಿ ಮನೋಹರ |
| ತಂದೆಯ ಹೆಸರು | : | ಹೆಚ್ ಮಯೂರೇಶ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬೆಣ್ಣೆಕಲ್ಲು ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನನಗೆ ಆರೋಪಿತನ ಪರಿಚಯ ಇರುವುದಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮುಮಾ ಮದ್ಯವನ್ನು ಅಮಾನತು ಪಡಿಸಿಕೊಂಡಿಲ್ಲ. ಈಗೆ ಸುಮಾರು 2 ವರ್ಷದ ಹಿಂದೆ ಹೆಚ್ ಬಿ ಹಳ್ಳಿ ಬಸ್ ನಿಲ್ದಾಣದ ಬಳಿ ಇದ್ದಾಗ ಮದ್ಯಾಹ್ನ 2 ಗಂಟೆ ಸಮಯದಲ್ಲಿ ಅಬಕಾರಿ ಪೋಲೀಸರು 2 ದಾಖಲಲೆಗಳಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಸಾಕ್ಷಿಯು ನಿಪಿ 1 ಮತ್ತು 2 ರಲ್ಲಿಯ ತನ್ನ ಸಹಿಗಳು ಇವೆ ಅಂತಾ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 1 ಸಿ ಮತ್ತು ನಿಪಿ 2 ಸಿ ಅಂತಾ ಗುರುತಿಸಲಾಯಿತು. ಮುಮಾ 1 ಅನ್ನು ನಾನು ನೋಡಿಲ್ಲ ಆದ್ದರಿಂದ ನಾನು ಗುರುತಿಸಲು ಸಾದ್ಯವಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲ. ನನ್ನ ಜೋತೆ ಆ ದಿನ ಚಾಸಾ 2 ರವರು ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತಾರೆ ಸದರಿ ದಾಖಲೆಗಳಲ್ಲಿ ಏನು ಬರೆದಿರುತ್ತಾರೆ ಅನ್ನುವುದು ನನಗೆ ಗೊತ್ತಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿನಾಂಕ 20.09.2023 ರಂದು ಸಂಜೆ 07.30 ಗಂಟೆಯಿಂದು ಸಂಜೆ 8.35 ಗಂಟೆಯವರೆಗೆ ನನ್ನ ಮತ್ತು ಚಾಸ 2 ರವರ ಸಮಕ್ಷಮ ಅಬಕಾರಿ ಪೋಲಿಸರು ಹೆಚ್ ಬಿ ಹಳ್ಳಿಯ ಜಯಭವಾನಿ ಸಾವಜಿ ಹೋಟಲಿನಲ್ಲಿ ಪಂಚನಾಮೆಯನ್ನು ಜರುಗಿಸಿ ಸದರಿ ಹೋಟಲಿನಿಂದ ಬಿಪಿ

ಕಂಪನಿಯ 180 ಮೀಲಿಯ ವಿಸ್ಕಿಯ ಟೆಟ್ರಾ ಪೌಚ್ಗಳು ಮತ್ತು 180 ಮಿಲಿಯ 8 ಪಿ ಎಂ ವಿಸ್ಕಿಯ 2 ಟೆಟ್ರಾ ಪ್ಯಾಕೆಟ್ , ಓ ಎಂ ಆರ್ ರಂ ಹೆಸರಿನ 3 ಮದ್ಯದ ಟೆಟ್ರಾ ಪ್ಯಾಕೆಟ್ ಗಳು, 180 ಎಂ ಎಲ್ ನ ಎಂ ಸಿ ನಂ 1 ಕಂಪನಿಯ 1 ಟೆಟ್ರಾ ಪೌಚ್ ಹಾಗೂ 650 ಮಿಲಿಯ ಕಿಂಗ್ ಫಿಶರ ಸ್ಟ್ರಾಂಗ್ 5 ಬಾಟಲಿಗಳು, 650 ಮಿಲಿಯ ಕಿಂಗ್ ಫಿಶರ ಸ್ಟ್ರಾಂಗ್ ಪ್ರಿಮಿಯಂ 2 ಬಿಯರ ಬಾಟಲಿಗಳನ್ನು ಅಮಾನತುಪಡಿಸಿಕೊಂಡು ಅದರಲ್ಲಿ 13 ಟೆಟ್ರಾ ಪೌಚ್ ಹಾಗೂ 7 ಬಿಯರ್ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಳ್ಳಲಾಯಿತು ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಪೋಲೀಸರು ನಿಪಿ 1 ರಂತೆ ಪಂಚನಾಮೆಯನ್ನು ಬರೆದಿದ್ದು ನಿಪಿ 2 ರಂತೆ ಮಾದರಿ ಸಹಿ ತಯಾರಿಸಿದ್ದು ಅವುಗಳಲ್ಲಿರುವಂತಹ ವಿಚಾರಗಳನ್ನು ತಿಳಿಳಿದುಕೊಂಡು ನಾನು ಸ್ಥಳದಲ್ಲಿ ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ</u>

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ